ಆಗದಿದ್ದರೆ ಆ ಪಾಪ ನನಗೆ ತಟ್ಟುತ್ತದೆ. ನಾವುಗಳಿಲ್ಲರೂ ಗುಬ್ಬಿ ವೀರಣ್ಣನವರ ಕಲೆಯ ಬಗ್ಗೆ ಬಹಳ ವಾಗಿ ಕೊಂಡಾಡುತ್ತಿದ್ದೇವೆ. ಆದ್ದರಿಂದ ಅವರ ಜ್ಞಾಪಕಾರ್ಥವಾಗಿ ಒಂದು ನಾಟಕ ಮಂದಿರವನ್ನಾ ದರೂ ಕಟ್ಟಲು ನಮಗೆ ಸಹಾಯ ಮಾಡುತ್ತೀರಾ ? ಎಂದು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಪೆಚ್.ಸಿ. ಶ್ರೀಕಂಠಯ್ಯ.—ಗುಬ್ಬಿ ವೀರಣ್ಣನವರ ಬಗ್ಗೆ ನೀವು ಹೊಟ್ಟೆ ಉರಿ ಪಟ್ಟುಕೊಳ್ಳ ಬೇಕಾದ್ದು ಏನೂ ಬೇಡ. ಆ ಜಾಗ ಕಾರ್ಪೊರೇಷನ್‌ನವರಿಗೆ ಸೇರಿದ್ದು. ಅದು ವೀರಣ್ಣನವರ ಸ್ವಂತ ಜಾಗವಲ್ಲ. ಹಿಂದೆ ಕಾರ್ಪೊರೇಷನ್ ಲ್ಯಾಂಡನ್ನು ಅವರಿಗೆ ಲೀಸ್ ಕೊಟ್ಟಿದ್ದರು. ಈಗ ಅದನ್ನು ಕಾರ್ಪೊರೇಷನ್‌ನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ.—ಆ ಲೀಸ್ ೧೦೦ ವರ್ಷಕ್ಕೆ ಇರುವುದು. ತಮಗೆ ಅನುಮಾನವಿದ್ದರೆ ಫೈಲ್ ತೆಗೆಸಿ ನೋಡಿ. ಅದು ಏನೇ ಇದ್ದರೂ ಈಗ ಆ ಜಾಗವನ್ನು ಸ್ಥಳಪರಿಶೀಲನೆ ಮಾಡಿ ಆದಷ್ಟು ಬೇಗ ಕೆಲಸ ಪ್ರಾರಂಭಿಸುತ್ತೀರಾ ?

ಶ್ರೀ ಪೆಚ್.ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ಸರ್ಕಾರದ ಕಡೆಗೆ ಒಂದು ಎಸ್ಪಿಮೇಟ್ ಬಂದಿದೆ. ಏನೋ ಒಂದು ಕ್ಲಾರಿಫಿಕೇಷನ್ ಕೇಳಿ ಆ ಫೈಲನ್ನು ವಾಪಸ್ಸು ಕಳುಹಿಸಿದ್ದೇವೆ. ಅದು ಬಂದಕೂಡಲೇ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sites distributed in Dakshina Kannada District

888 DR. DAMODAR MULKY (Moodabidri).—Will the Minister of State for Housing be pleased to state.—

(a) the total number of sites distributed to the landless families so far in Dakshina Kannada District and total number of sites distributed in Mangalore and Karkala Taluks separately ,

(b) the total number of sites of which physical possession had been given to the grantees,

(c) The number of sites of which physical possessian had been given to grantees at Athikaributtu Village of Mangalore Taluk ?

SRI P. F. RODRIGUES (Minister of State for Housing).—

(a) 59.022, Mangalore Taluk 9,951. Karkala Taluk 7,500 (upto end of February 1979.)

(b) 51,745.

(c) Nill.

ಶ್ರೀ ದಾಮೋದರ ಮುಲ್ಕಿ.—ಸ್ವಾಮಿ, ಇಲ್ಲಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೫೧,೭೪೫ ನಿವೇಶನಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದು ಕೇವಲ ಹಕ್ಕು ಪತ್ರವನ್ನು ಕೊಟ್ಟಿದ್ದೀರೊ ಅಥವಾ ಅವರಿಗೆ ಸ್ಥಳವನ್ನು ತೋರಿಸಿ ಅದರ ಒಡೆತನವನ್ನು ಕೊಟ್ಟಿದ್ದೀರೋ ?

ಇನ್ನು ಎರಡನೆಯದಾಗಿ ಮಂಗಳೂರು ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಎಷ್ಟು ಸೈಟುಗಳನ್ನು ಫಿಸಿಕಲ್ ಆಗಿ ಸ್ವಾಧೀನಕ್ಕೆ ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಪಿ.ಎಫ್. ರೋಡ್ರಿಗ್ಸ್.—ಈಗ ೫೧,೭೪೫ ನಿವೇಶನಗಳನ್ನು ಫಿಸಿಕಲ್ ಆಗಿ ಸ್ವಾಧೀನಕ್ಕೆ ಕೊಟ್ಟಿದ್ದೇವೆ. ಇಡೀ ತಾಲ್ಲೂಕಿನಲ್ಲಿ ಇನ್ನೂ ೭,೨೭೭ ನಿವೇಶನಗಳನ್ನು ಕೊಡಲಿಕ್ಕೆ ಇದೆ.

ಶ್ರೀ ದಾಮೋದರ ಮುಲ್ಕಿ.—ತಾವು ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿರುವುದರಿಂದ ತಮಗೆ ಎಲ್ಲ ವಿಷಯವೂ ಗೊತ್ತಿದೆ. ಈಗ ೫೧,೭೪೫ ನಿವೇಶನಗಳನ್ನು ಕೊಟ್ಟಿದ್ದೇವೆಂದು ತಾವು

ಏನೊಂದು ಅಂಕಿಅಂಶಗಳನ್ನು ಇಲ್ಲಿ ಕೊಟ್ಟಿದ್ದೀರಿ, ಇದು ಸತ್ಯಕ್ಕೆ ದೂರವಾದುದು. ಈ ರೀತಿ ತಪ್ಪು ಅಂಕಿಅಂಶಗಳನ್ನು ಕೊಟ್ಟಿರತಕ್ಕ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ.ಎಫ್, ರೋಡ್ರಿಗ್ಸ್.—ಅಧಿಕಾರಿಗಳು ತಮ್ಮ ಅಂಕಿಅಂಶಗಳನ್ನು ಕೊಟ್ಟಿದ್ದಾರೆಂದು ತಿಳಿದು ಬಂದರೆ ಖಂಡಿತ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ದಾಮೋದರ ಮುಲ್ಕಿ.—ಅತ್ತಿಕಾರಿಬುತ್ತೂ ಗ್ರಾಮದಲ್ಲಿ ನಿವೇಶನಗಳನ್ನು ಏತಕ್ಕೆ ಒಂದೂ ಕೊಟ್ಟಿಲ್ಲ.

ಶ್ರೀ ಪಿ.ಎಫ್. ರೋಡ್ರಿಗ್ಸ್.—ಇದು ೧೯೭೪ರಲ್ಲಿ ಕೋರ್ಟ್‌ನಿಂದ ತಡೆ ಆಜ್ಞೆ ಬಂದಿದ್ದರಿಂದ ಅಲ್ಲಿ ಕೊಟ್ಟಿಲ್ಲ. ಈಗ ಅಲ್ಲಿ ೫೮ ಸೈಟುಗಳಂ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆನಂದಕುಂದ ಹೆಗ್ಡೆ.—ಸ್ವಾಮಿ, ಬಡವರು ಮನೆ ಕಟ್ಟಿಕೊಳ್ಳುವ ಸಲುವಾಗಿ ಸರ್ಕಾರದಿಂದ ೧೨೫೦ರೂ. ಮತ್ತು ೨೦೦೦ ರೂಪಾಯಿಗಳನ್ನು ಏನು ಕೊಡುತ್ತೀರಿ ಆ ಹಣದಿಂದ ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ನಾವು ಕೊಡುವ ಹಣ ಕೇವಲ ಸಹಾಯಕ್ಕಾಗಿ ಮಾತ್ರ. ಆದರೆ ಆ ಹಣದಿಂದ ಪೂರ್ತಿ ಮನೆಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ನಮಗೂ ಗೊತ್ತಿದೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ನಿವೇಶನಗಳನ್ನು ತಾವು ಯಾವ ಆಧಾರದ ಮೇಲೆ, ಅಥವಾ ಅರ್ಹತೆ ಮೇಲೆ ಹಂಚುತ್ತೀರಿ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಮನೆ ನಿವೇಶನಗಳನ್ನು ಕೊಡಬೇಕಾದರೆ ಅವರಿಗೆ ಬೇರೆ ಎಲ್ಲಿಯೂ ಸ್ವಂತ ಮನೆಯೊಗಲಿ, ಜಮೀನು ಆಗಲಿ ಇರಬಾರದು, ವರ್ಷಕ್ಕೆ ಇಂತಿಷ್ಟೇ ವರಮಾನವಿರಬೇಕು, ಇನ್ನೂ ಮುಂತಾಗಿ ಕೆಲವು ಕಂಡಿಷನ್ಸ್ ಇದೆ. ಆ ಪರಿಮಿತಿಯೊಳಗೆ ಯಾರು ಬರುತ್ತಾರೆ ಅಂಥವರಿಗೆ ನಾವು ನಿವೇಶನಗಳನ್ನು ಕೊಡುತ್ತೇವೆ. ಇದನ್ನು ಬಿ.ಡಿ.ಒ. ಅವರು ಚೆಕ್ ಮಾಡುತ್ತಾರೆ. ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಇಂಥ ಕೇಸ್‌ಗಳಿದ್ದರೆ ಅವುಗಳನ್ನು ಸಂಬಂಧಪಟ್ಟ ಬಿ.ಡಿ.ಒ ಅವರ ಗಮನಕ್ಕೆ ತರಬಹುದು.

ಶ್ರೀ ದಾಮೋದರ ಮುಲ್ಕಿ.—ಸ್ವಾಮಿ, ಅತ್ತಿಕಾರಿಬುತ್ತು ಗ್ರಾಮದಲ್ಲಿ ಸ್ವೇ ತಂದಿದ್ದರಿಂದ ಅವರಿಗೆ ನಿವೇಶನಗಳನ್ನು ಕೊಟ್ಟಿಲ್ಲವೆಂದು ಹೇಳಿದಿರಿ. ಆವರು ಕೋರ್ಟಿಗೆ ಹೋಗಿರುವುದು ನಿಜ. ಆದರೆ ಅವರಿಗೆ ಕೋರ್ಟ್‌ನಲ್ಲಿ ಸ್ವೇ ಕೊಟ್ಟಿಲ್ಲ. ಕೆಲವು ತಿಂಗಳುಗಳ ಹಿಂದೆ ಅಲ್ಲಿನ ಜಿಲ್ಲಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ಇದುವರೆಗೂ ಸ್ವೇ ಬಂದಿಲ್ಲ, ಆದ್ದರಿಂದ ಇವರಿಗೆ ನಿವೇಶನ ಕೊಡಬಹುದೆಂದು ಹೇಳಿದ್ದಾರೆ. ರೆವಿನ್ಯೂ ಅಧಿಕಾರಿಗಳು ಅವರ ಜೊತೆಯಲ್ಲಿ ಸೇರಿಕೊಂಡು ಆ ಬಡವರಿಗೆ ತೊಂದರೆ ಕೊಡುತ್ತಿದ್ದಾರೆ. ಅಲ್ಲಿ ಹೆಚ್ಚಾಗಿ ಹಿಂದುಳಿದವರು ಮತ್ತು ಹರಿಜನರೇ ಇರುವುದರಿಂದ ತಕ್ಷಣ ತಾವು ಇದರ ಬಗ್ಗೆ ಸ್ಥಳಪರಿಶೀಲನೆ ಮಾಡಿ ಆ ಜನರಿಗೆ ನಿವೇಶನಗಳನ್ನು ಕೊಡುತ್ತಿರಾ ? ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಈ ವಿಷಯದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ತೊಂದರೆ ಕೊಡುತ್ತಿದ್ದಾರೆ ಎನ್ನುವ ವಿಷಯ ನನ್ನ ಗಮನಕ್ಕೆ ಬಂದಿದೆ. ಆ ಕ್ಷೇತ್ರದಿಂದ ಅಧಿಕಾರಿಯನ್ನು ವರ್ಗ ಮಾಡಿದ್ದೇನೆ. ಇನ್ನೇನಾದರೂ ಕಿರುಕುಳ ಅಲ್ಲಿ ಉಂಟಾಗುತ್ತಿದೆ ಎಂದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೂಡಲೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

SRI S. R. BOMMAI.—One point arises out of the answer. The Hon. Minister answered that the matter has been pending in the court and that a stay has been issued. The hon. Member says that no suit has been filed and there is no stay.

SRI P. F. RODRIGUES.—My report is that a suit has been filed and is pending in the court. What the hon.Member says is that there is no stay order. If there is no stay order, I will go ahead.

SRI. S. R. BOMMAI.—Let the Hon.Minister verify the fact and if there is no stay order he should assure the House that he will take action against the officer concerned who has furnished this false information to this House. If there is no suit filed and there is no stay order and if such a reply is given it will be irresponsible and will be misleading the House.

MR. SPEAKER.—Please verify the fact.

SRI S. R. BOMMAI.—Within what time will he report back to the House ?

SRI P. F. RODRIGUES.—My report is that a suit has been filed in 1974 and the hon Member also agrees that a suit has been filed. The only difference of opinion is about the stay order. The hon.Member says there is no stay order. If there is no stay order, I shall see that action is taken and the sites are distributed.

MR. SPEAKER.—Question 907 held over.

Loss or Profit in Government silk filatures

921 SRI M. SIDDAMADAIAH (Kollegal).—Will the Minister for Sericulture and Horticulture be pleased to state —

(a) the names of Government Silk Filatures and the amount of Profit earned or the amount of loss sustained during 1976-197 and onwards;

(b) the action taken by the Government to wipe out the losses ?

SRI K. B. SHIVAIAH (Minister for Sericulture and Horticulture).—

(a) The details of net loss sustained by the Government silk Filatures during 1976-1977 and 1977-1978 are as follows.—

			(Rs. in lakhs)
1.	Govt. Silk Filature,	Kanakapura ...	16.72
2.	do	Mysore ...	18.98
3.	do	Kollegal ...	37.02
4.	do	T. Narasipur ...	43.53
5.	do	Santhemarahalli ...	24.20
6.	do	Chamarajanagar ...	21.60
7.	do	Mamballi ...	13.32
		Total Rs. ...	175.37

(b) The following measures have been taken by Government to wipe out the losses ...